ದಿನಾಂಕ:21/09/2024 ರಂದು ಸಾಕ್ಷಿ ಆರ್.ಡಬ್ಲ್ಯೂ-1 ರವರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

(ಮಧ್ಯಂತರ ಅರ್ಜಿ ಆದೇಶವನ್ನು ಪುರಸ್ಕರಿಸಿದ ಮೇರೆಗೆ)

**<u>ಪಾಟೀ ಸವಾಲುಃ ಅರ್ಜಿದಾರರ ಪರಃ ಶ್ರೀ ಎಂ.ಸಿ.ಎಚ್.ವಕೀಲರಿಂದಃ-</u>**

ದಿನಾಂಕಃ19/06/2012 ರಿಂದ ದಿನಾಂಕಃ20/12/2014 ರವರೆಗೆ ಅರ್ಜಿದಾರ ನಮ್ಮ ಕಾರ್ಖಾನೆಯಲ್ಲಿ ಸರಿಯಾಗಿ ಕೆಲಸ ಮಾಡಿರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ. ದಿನಾಂಕಃ19/6/2012 ರಿಂದ ದಿನಾಂಕಃ20/12/2014 ರವರೆಗೆ ಅರ್ಜಿದಾರ ನಮ್ಮ ಕಾರ್ಖಾನೆಯಲ್ಲಿ ಸರಿಯಾಗಿ ಕೆಲಸ ಮಾಡಿರುತ್ತಾರೆ ಅಂತಾ ಗೊತ್ತಿದ್ದರೂ ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

ಅರ್ಜಿದಾರರು 61 ದಿನ ಗೈರು ಹಾಜರಾದ ಬಗ್ಗೆ ವಿಚಾರಣಾಧಿಕಾರಿ ಮುಂದೆ ವೈದ್ಯಕೀಯ ಪ್ರಮಾಣ ಪತ್ರ ಹಾಜರುಪಡಿಸಿರುತ್ತಾರೆ ಎಂದು ಸೂಚಿಸುವುದು ಸರಿ. ಅರ್ಜಿದಾರರು ಹಾಜರುಪಡಿಸಿದ ದಾಖಲೆಗಳನ್ನು ವಿಚಾರಣೆ ವೇಳೆಗೆ ಗಣನೆಗೆ ತೆಗೆದುಕೊಂಡಿಲ್ಲ ಎಂದು ಸೂಚಿಸುವುದು ಸರಿಯಲ್ಲ. ನಾನು ನಮ್ಮ ಎದುರುದಾರರ ಕೆಳ ಅಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ.</u>**

*(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.)*
ಓ ಹೇ ಕೇ ಸರಿ ಇದೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಹಾವೇರಿ.